ಎಂದು ಹುಡುಗ ಗಟ್ಟಿಯಾದ. ರೈಟರ್, 'ನಿನ್ ಕತಿ ಮುಗ್ಸಿದ್‌ಮ್ಯಾಲೆ, ನಿಮ್ ಮನಿಯೋರ್ ಕತೀನೂ ಮುಗುಸ್ತಾರ' ಎಂದು ಹುಡುಗನನ್ನೇ ನೋಡಿದ. ತನ್ನ ಜಾತಿಯವಳನ್ನೇ ಒಲವಿಸಿದ್ದ ಹುಡುಗ ಮಾಡಿದ್ದ ತಪ್ಪೇನೆಂದರೆ, ಅವಳ ಅಪ್ಪನ ಶ್ರೀಮಂತಿಕೆಯನ್ನು ಕಾಣದಾಗಿದ್ದು. ಮನೆಯವರ ನೆನಪಾಗಿ ಹುಡುಗ ಚಿಂತೆಗೆ ಬಿದ್ದ. ರೈಟರ್ ತನ್ನೊಳಗೇ ನಕ್ಕ.

ಸಬ್‌ಇನ್ಸ್‌ಪೆಕ್ಟರ್ ಕೋಣೆಯಲ್ಲಿ ಮೂವತ್ತೈದರ ಚಂದ್ರಶೇಖರ ಕುಂತಿದ್ದ. ಅವನನ್ನು ನೋಡಿದ ಬಲರಾಮ, 'ಏನ್ಲೇ ನಿನ್ ಕತೀ. ಸುಮ್ನಿರಾಕ ಏನಾಗಿತ್ತು ನಿನೀಗೆ?' ಎಂದಾಗ ಚಂದ್ರಶೇಖರ ಮಾತಾಡಲಿಲ್ಲ. ಬಲರಾಮ ಹಳೆಯದನ್ನು ಕೆದಕಲು ಹೋಗದೇ, 'ಮಗ್ನೇ, ನಿನ್ ಕೆಲ್ಸ ಹೋಗ್ತತೆ, ಗ್ಯಾರಂಟಿ ಜೈಲಾಗ್ತತೆ. ಬೇಲೂ ಸಿಗಂಗಿಲ್ಲ' ಎಂದ ಅಷ್ಟೆ. 'ಒಂದೆಲ್ಡು ಲಕ್ಷ ಕೊಡಾನ ಅಂತ ಮಾಡೀನಿ' ಎಂದ ಚಂದ್ರಶೇಖರನ ಮೋರೆ ನೋಡಿದ ಬಲರಾಮ. ಚಂದ್ರಶೇಖರ ಏನೋ ಹೇಳಲು ಹೋದಾಗ, ಕೋಣೆಯ ಹೊರಗಿನಿಂದ, 'ಸ್ವಾಮಿ ಒಳಾಗ ಬರ್ತೀನಿ' ಎಂದು ಬಲರಾಮನಿಂದ 'ಬಾ'ಎನಿಸಿಕೊಂಡು ಬಂದ ಅಂಜಿನೆಪ್ಪ.

'ಕುತ್ಗಳಪಾ'ಎಂದ ಬಲರಾಮನ ದನಿಗೆ ಚಂದ್ರಶೇಖರನ ಪಕ್ಕ ಕೂರಲು ಅಂಜಿನೆಪ್ಪ ಹಿಂಜರಿದ. 'ನೋಡಣ, ಕೇಸು ಕೋರ್ಟು ಎಲ್ಲಾ ದುಡ್ಡಿರೋರಿಗೆ, ನಮ್ಮಂತಾರಿಗಲ್ಲ. ಕೇಸ್ ಆದ್ರೆ ಊರ್ ಮಂದೀನೆಲ್ಲಾ ಎದ್ರು ಹಾಕ್ಕಂಬೇಕಾಗ್ತತೆ. ನೋಡು ಯೋಚ್ನೆ ಮಾಡು. ನೀನಿಗೂ ಇನ್ನಾ ಎಲ್ಡು ಮಕ್ಳು ಐದಾವ. ಈತೂ ಮಕ್ಕೊಂದಿಗ. ನೀನು ಇಲ್ಲೇ ರಾಜೀ ಆಗ್ತೀ ಅಂದ್ರೆ ಎರಡ್ ಲಕ್ಷ ಕೊಡಾಕ ಒಪ್ಗಂಡಾನ' ಎಂದು ಮಾತು ನಿಲ್ಲಿಸಿದ. ಬಲರಾಮನ ಎಲ್ಲಾ ಮಾತಿಗೂ ಅಂಜಿನೆಪ್ಪನ ಕಣ್ಣೀರು ಉಕ್ಕುತ್ತಿತ್ತು. ರಾಜೀ ಅನ್ನೋ ಪದ ಮತ್ತೆ ಮತ್ತೆ ನೆನಪಾಗಿ ಕೂರಲಾಗದೆ ಎದ್ದು ಹೊರಗೆ ನಡೆದ.

3

### ಕಿರಣನ ಕೇರಿ ಮನೆ

'ಈ ಮನೀ ಬೀಳ್ಸಿ ಊರ್ ಬಿಟ್ಟು ಹೋಗ್ಬುಡಾನ. ಯಾರಿಗೂ ಶಾಲಿಗೀಲಿ ಏನೂ ಬ್ಯಾಡ. ಕೂಲಿನಾಲಿ ಮಾಡ್ಕೆಂಡು ಉಸ್ರಾಡ್ಕೆಂಡು ತಣ್ಣುಗ ಇರ್ಲಿ. ಓದಾಕೋಗಿ ಸಾಯಾದು ಬ್ಯಾಡ' ಎಂದು ಅಂಜಿನೆಪ್ಪನ ಮುಂದೆ ಕುಂತಿದ್ದ ಹೆಂಡತಿ ಮೂವತ್ತರ ಮರಿಯವ್ವ ಅಳಲತ್ತಿದಳು. ಅವ್ವ ಅಳಲತ್ತಿದ್ದನ್ನು ನೋಡಿ ಸಣ್ಣ ಮಗ ಅರುಣ ಮತ್ತು ಕೈಕೂಸು ನೀಲವ್ವ ಅಳಲತ್ತಿದರು. ಅಲ್ಲಲ್ಲಿ ಹೆಂಚುಗಳನ್ನು ಹೊಡೆದುಕೊಂಡು ಮನೆಯ ಮಾಡಿನಿಂದ ಬಳ್ಳಾರಿ ಸೀಮೆಯ ಗಟ್ಟಿ ಬಿಸಿಲು ನುಗ್ಗುತ್ತಿತ್ತು. ಮಣ್ಣಿನ ಗೋಡೆಗಳು ಒಳಗೊಳಗೇ ಬಹಳ ನೆಂದಿದ್ದರಿಂದ ಗೋಡೆಯ ವಾಸನೆಯನ್ನು ಮನೆಯ ಬಟ್ಟೆಗಳೆಲ್ಲಾ ಮೆತ್ತಿಗೊಂಡಿದ್ದವು. ಇವ್ಯಾವುವೂ ಇವರನ್ನು ಇಷ್ಟು ಏಡು ಕಾಡಿರಲಿಲ್ಲ. ಕಿರಣ ಕೈ ತಪ್ಪಿ ಹೋಗುತ್ತಿರುವುದು ಈಗ ಊರನ್ನೇ ಸಾಕೆನಿಸಿತ್ತು. ಅರುಣ, 'ನಾನು ಶಾಲಿ ಬಿಟ್ಟು ಬರಂಗಿಲ್ಲವಾ' ಎಂದ. ಟಕ್ಕನೇ ಎದ್ದ ಮರಿಯವ್ವ ಮುಸುಡಿಗಿಸಡಿ ನೋಡದೇ ಅವನ ಕಪಾಳಕ್ಕೆ ಬಾರಿಸಿ, ಬಗ್ಗಿಸಿ ಇದ್ದಬದ್ದ ಬಲವನ್ನು ಒಮ್ಮೆಗೇ ತಂದುಕೊಂಡು ಬೆನ್ನಿಗೆ ನಾಲ್ಕು ಗುದ್ದಿದಳು. ಅರುಣ ನೆಲಕ್ಕೆ ಬಿದ್ದು ಜೋರಾಗಿ ಅಳಲತ್ತಿದ. ಅಣ್ಣನ ಕೂಗಿಗೆ ನೀಲವ್ವನೂ ಜೊತೆಯಾದಳು. 'ವದರಿ ವದರೀ ಇಬ್ರೂ ಸತ್ತೋಗ್ರಿ' ಎಂದು ಮಕ್ಕಳನ್ನು ಅಳಲು ಬಿಟ್ಟು ಮರಿಯವ್ವ ಅಡುಗೆ ಮನೆಗೆ ನಡೆದಳು. ಅಂಜಿನೆಪ್ಪನ ಗುಂಡಿಗೆಯ ಮಾತು ಯಾರಿಗೂ ಕೇಳಿಸುತ್ತಿರಲಿಲ್ಲ, ಅವನೂ ಕೇಳಿಸಿಕೊಳ್ಳುತ್ತಿರಲಿಲ್ಲ.

ಅರುಣ ತೀರ್ಮಾನ ಮಾಡಿದ್ದು ಒಂದೇ, 'ಅಣ್ಣ ಆಸ್ಪತ್ರಿಯಿಂದ ಮನೀಗೆ ಬಂದ್ರುಟ್ಲೇ, ನಾನೂ ಆತುನ್ ಹಿಂದೇ ದಿನಾ ಶಾಲಿಗೆ ಓಡೋಗ್ಬೇಕು, ರೊಳ್ಳಿ ತಗೀಬಾರ್ದು' ಎಂಬುದು. ಅಣ್ಣನನ್ನು ನೋಡಿ ಕೊಳ್ಳುತ್ತಿರುವ ಅಜ್ಜಿಯಾದರೂ ಇಲ್ಲಿ ಇದ್ದಿದ್ದರೆ ತನ್ನ ಕಷ್ಟಕ್ಕೆ ಕಿವಿಯಾಗಿ ನನ್ನನ್ನು ರಮಿಸುತ್ತಿದ್ದಳು ಎಂದು ಕೊಂಡ ಅರುಣ, ಅಳುವುದನ್ನು ಕಮ್ಮಿಮಾಡಿ ಉಸಿರನ್ನು ಹದಕ್ಕೆ ತಂದುಕೊಂಡ. ಅವನ ತೀರ್ಮಾನಕ್ಕೆ ತನ್ನದೂ ಒಪ್ಪಿಗೆ ಇದೆ ಎನ್ನುವಂತೆ ನೀಲವ್ವಳೂ ಅಳುವುದನ್ನು ನಿಲ್ಲಿಸಿ ಸಣ್ಣ ಅಣ್ಣನ ಮೂತಿ ನೋಡಲತ್ತಿದಳು.

4

### ಸರ್ಕಾರಿ ಪ್ರವಾಸಿ ಮಂದಿರ

'ಸಂವಿಧಾನವೊಂದೇ ಎಲ್ಲಾ ಜಾತಿಗಳ ಜನರನ್ನ ಸಮಾನವಾಗಿ ಕಾಣುವ ಧರ್ಮ. ನಮ್ಮ ಸರ್ಕಾರ ಯಾವತ್ತೂ ಬಡವರ, ದೀನ ದಲಿತರ, ಹಿಂದುಳಿದವರ ಮತ್ತು ಮಕ್ಕಳು ಮಹಿಳೆಯರ ಪರ. ಕಾನೂನಿಗೆ ಯಾರೇ ಧಕ್ಕೆ ತರಲಿ ಅಂತಹವರನ್ನ ನಾವು ಸುಮ್ನೆ ಬಿಡೋದಿಲ್ಲ. ಇಂತಹ ಕೃತ್ಯಗಳನ್ನ ನಾನು ಖಂಡಿಸ್ತೀನಿ. ವೈಯಕ್ತಿಕವಾಗಿ